

ಚುಚ್ಚು ಮಾತನಾಡುವುದು ಇಲ್ಲವಾದರೂ ಈ ದೇಶದಲ್ಲೂ ವಿವಾಹ ಪದ್ಧತಿ ಅದರದೇ ಆದ ಘನತೆಯನ್ನು ಉಳಿಸಿಕೊಂಡಿದೆ. ಭಾರತದಲ್ಲಿ ಆ ಒತ್ತಾಯ ತಂದೆ ತಾಯಿಯರಿಂದ, ಸಮಾಜದಿಂದ ಪ್ರತ್ಯಕ್ಷವಾಗಿಲ್ಲದಿದ್ದರೂ ಪರೋಕ್ಷವಾಗಿ ಇದ್ದೇ ಇರುತ್ತದೆ. ಹೆಣ್ಣು ಅದೆಷ್ಟೇ ಆರ್ಥಿಕವಾಗಿ ಸ್ವತಂತ್ರಳಾದರೂ ಮದುವೆಯಾಗಿಲ್ಲ ಎಂಬ ಒಂದೇ ಕಾರಣಕ್ಕೆ ತನ್ನ ತಂದೆ ತಾಯಿಯನ್ನು ಎದುರು ಹಾಕಿಕೊಂಡು, ಸಮಾಜದ ಕುಹಕವನ್ನೆದುರಿಸಿ ಬಾಳಬೇಕಿದೆ. ತನ್ನ ಸ್ವತಂತ್ರ ಆಯ್ಕೆಗಳಿಗೆ ಅಪರಾಧಿ ಪ್ರಜ್ಞೆಯನ್ನು ಎದುರಿಸಬೇಕಿದೆ.

ಯಾವುದೇ ಸಮಾಜದಲ್ಲಿ ಮಹಿಳೆ ರಾಜಕೀಯವಾಗಿ ಅತ್ಯುನ್ನತ ಸ್ಥಾನಕ್ಕೇರದೇ ಬದಲಾವಣೆ ಸಾಧ್ಯವಿಲ್ಲ. ಭಾರತದಲ್ಲಿ ಎಪ್ಪತ್ತರ ದಶಕದಲ್ಲೇ ಇಂದಿರಾ ಪ್ರಧಾನಿಯಾಗಿದ್ದರು. ಅದು ಅಮೆರಿಕದಲ್ಲಿ ಇನ್ನೂ ಸಾಧ್ಯವಾಗಿಲ್ಲ. 2016ರಲ್ಲಿ ನಡೆದ ಅಧ್ಯಕ್ಷೀಯ ಚುನಾವಣೆಯಲ್ಲಿ ಹಿಲರಿ ಕ್ಲಿಂಟನ್ನರು ತಮ್ಮ ಎದುರಾಳಿ ಟ್ರಂಪ್‌ರಿಗಿಂತ ಎಲ್ಲ ವಿಷಯದಲ್ಲೂ ಅರ್ಹರಾಗಿದ್ದರೂ ಮಹಿಳೆ ಎಂಬ ಒಂದೇ ಕಾರಣಕ್ಕೆ ಅಧ್ಯಕ್ಷೆಯಾಗಲು ಸಾಧ್ಯವಾಗಿರಲಿಲ್ಲ. ಜನಾಭಿಪ್ರಾಯ ಸಂಗ್ರಹಣೆ ಪೋಲ್‌ಗಳ ಪ್ರಕಾರ ಅಮೆರಿಕನ್ನರ ಈ ಮನಸ್ಥಿತಿ ಬೆಳಕಿಗೆ ಬಂದಿತ್ತು. ಮುಂದಿನ ವರ್ಷ ನಡೆಯುವ ರಾಷ್ಟ್ರೀಯ ಚುನಾವಣೆಯಲ್ಲಾದರೂ ಮಹಿಳೆಯನ್ನು ದೇಶದ ಉನ್ನತ ಸ್ಥಾನದಲ್ಲಿ ಕಾಣಲು ಸಾಧ್ಯವೇ ಕಾದು ನೋಡಬೇಕಿದೆ. ಈ ಬಾರಿಯ ಸ್ಪರ್ಧೆಯಲ್ಲಿ ಎಲಿಜಬೆತ್ ವಾರೆನ್, ಕಮಲಾ ಹ್ಯಾರಿಸ್, ತುಳಸಿ ಗಬ್ಬಾರ್ಡ್, ಕ್ರಿಸ್ಟೀನ್ ಗಿಲ್ಲಿಬ್ರಾಂಡ್, ಏಮಿ ಕ್ಲೊಬುಚಾರ್ ಮುಂತಾದ ಮಹಿಳೆಯರು ಮುಂಚೂಣಿಯಲ್ಲಿದ್ದಾರೆ.

ಇತ್ತೀಚೆಗೆ 'ಗಾರ್ಡಿಯನ್' ಪತ್ರಿಕೆಯಲ್ಲಿ ಪುಲಿಟ್ಜರ್ ಪ್ರಶಸ್ತಿ ವಿಜೇತೆ ಬ್ರಿಜಿಡ್ ಸ್ಕಲ್ಲ್ ಬರೆದ ಒಂದು ಲೇಖನ ಓದಿದೆ. ಹೆಣ್ಣುಮಕ್ಕಳ ಸಮಯ ಹೇಗೆ ದೈನಿಕದಲ್ಲಿ ಸೋರಿಹೋಗುತ್ತದೆ ಎಂಬ ಕಾಳಜಿಯನ್ನು ಬ್ರಿಜಿಡ್ ಈ ಲೇಖನದಲ್ಲಿ ವ್ಯಕ್ತಪಡಿಸುತ್ತಾರೆ. ಪ್ರಪಂಚದ ಬಹುದೊಡ್ಡ ಚಿಂತಕರ ಅಭ್ಯಾಸಗಳ ಬಗ್ಗೆ ಇರುವ ಪುಸ್ತಕವನ್ನು ಲೇಖಕಿ ಓದಿದಾಗ ಅವರನ್ನು ಅಚ್ಚರಿಗೊಳಿಸುವುದು ಆ ಚಿಂತಕರ ದಿನಚರಿಯಲ್ಲದೇ ಅವರ ಹೆಂಡತಿಯರ ದೈನಿಕಗಳು. ಸಿಗ್ಮಂಡ್ ಫ್ರಾಯ್ಡ್, ಕಾರ್ಲ್ ಮಾರ್ಕ್ಸ್, ಮಾರ್ಸೆಲ್ ಪ್ರೌಸ್ಟ್ ಮುಂತಾದವರ ಹೆಂಡತಿಯರು ತಮ್ಮ ಇಡೀ ಬದುಕನ್ನು ಮನೆ, ಸಂಸಾರಕ್ಕೆ ಮುಡಿಪಾಗಿಟ್ಟದ್ದಕ್ಕೇ ಈ ಚಿಂತಕರಿಗೆ ತಮ್ಮ ಚಿಂತನಾ ಲಹರಿಯನ್ನು ಮೊಟಕುಗೊಳಿಸದೆ ಸೃಜನಶೀಲ ಗ್ರಹಿಕೆಯಲ್ಲಿ ಮುಳುಗಿಹೋಗುವಷ್ಟು ಸಮಯ ಸಿಕ್ಕಿರಬಹುದೇ ಎಂಬ ವಾದವನ್ನು ಮುಂದಿಡುತ್ತಾರೆ. ಸಿಗ್ಮಂಡ್ ಫ್ರಾಯ್ಡ್‌ರ ಹೆಂಡತಿ ಮಾರ್ಥಾ, ಗಂಡ ಅಂದು ಧರಿಸಬೇಕಾದ ಬಟ್ಟೆಗಳನ್ನು ಆರಿಸಿ ಇಡುತ್ತಿದ್ದರಲ್ಲದೆ ಅವರ ಹಲ್ಲುಜ್ಜುವ ಬ್ರಶ್ಶಿಗೆ ಪೇಸ್ಟನ್ನೂ ಹಾಕಿ ಇರಿಸುತ್ತಿದ್ದರಂತೆ. ಕಾರ್ಲ್ ಮಾರ್ಕ್ಸ್ ಬ್ರಿಟನ್ನಿನ ಮ್ಯೂಸಿಯಂ ಒಂದರಲ್ಲಿ ಅಧ್ಯಯನದಲ್ಲಿ ತೊಡಗಿದ್ದಾಗ ಅವರ ಹೆಂಡತಿ ಹಳ್ಳಿಯಲ್ಲಿ ಆರು ಜನ ಮಕ್ಕಳ ಆರೈಕೆಯಲ್ಲಿ ನಿರತರಾಗಿದ್ದರಂತೆ. ಈ ಎಲ್ಲ ಹೆಣ್ಣುಮಕ್ಕಳೂ ಇತಿಹಾಸದ ಪುಟಗಳಲ್ಲಿ ಅದೃಶ್ಯರಾಗಿದ್ದು ಕಂಡು ಸಂಕಟವಾಗುತ್ತದೆ.

ಹಾಗಿದ್ದರೆ ವಿಶ್ವಪ್ರಸಿದ್ಧ ಲೇಖಕಿಯರು ಹೇಗೆ ಬರೆದರು?

'ಹೆಣ್ಣೊಬ್ಬಳಿಗೆ ಗದ್ಯ ಬರೆಯುವ ಇಚ್ಛೆಯಿದ್ದರೆ ಅವಳಿಗೆ ಸ್ವಂತ ಹಣ ಮತ್ತು ತನ್ನದೇ ಆದ ಒಂದು ಕೋಣೆ ಇರುವುದು ಅಗತ್ಯ' ಎಂದು ವರ್ಜೀನಿಯಾ ವೂಲ್ಫ್ ಹೇಳಿದ್ದನ್ನು ಇಲ್ಲಿ ನೆನೆಯಬಹುದು. ಅಮೆರಿಕನ್ ಕವಿ ಮಾಯಾ ಆಂಜೆಲೋ ತನ್ನ ಮನೆ, ಜನ ಎಲ್ಲರನ್ನೂ ಬಿಟ್ಟು ವಿಳಾಸವಿಲ್ಲದ ಹೋಟೇಲೊಂದರಲ್ಲಿ ಕೂತು ಯೋಚಿಸಲು, ಓದಲು ಮತ್ತು ಬರೆಯಲು ಸಮಯ ಮಾಡಿಕೊಂಡಿದ್ದರಂತೆ. ಆಲಿಸ್ ಮನ್ರೋ ಮನೆ, ಮಕ್ಕಳ ಕೆಲಸ ಎಲ್ಲ ಮುಗಿದ ಮೇಲೆ ಸಿಗುವ ಅಲ್ಪ ಸಮಯಕ್ಕಾಗಿಯೇ ಇಡೀ ದಿನ ಕಾಯ್ದು ಬರೆಯುತ್ತಿದ್ದರಂತೆ.

ಯಾವ ಮಹಿಳಾ ಸಾಹಿತಿಯೂ ನನ್ನ ಸಾಹಿತ್ಯವನ್ನು ಸರಿಗಟ್ಟುವಂಥ ಬರಹ ಬರೆಯಲು ಸಾಧ್ಯವಿಲ್ಲ ಅಂದಿದ್ದರಂತೆ ನೊಬೆಲ್ ಪ್ರಶಸ್ತಿ ವಿಜೇತ ವಿ.ಎಸ್. ನೈಪಾಲ್. 'ಮಹಿಳೆಯರ ಸಾಹಿತ್ಯ ತುಂಬಾ ಸೆಂಟಿಮೆಂಟಲ್' ಎಂದವರು ಜರಿದಿದ್ದರಂತೆ. ಯಾರಿಗೆ ಗೊತ್ತು, ಯಾವ ಮಹಿಳಾ ಸಾಹಿತಿಗೂ ನೈಪಾಲರಷ್ಟು ಸುದೀರ್ಘ ಏಕಾಂತ ಇಲ್ಲಿಯ ತನಕ ದೊರೆತಿಲ್ಲವೇನೋ!

ಹಾಗಾದರೆ ಈ ವಿಷವರ್ತುಲದಿಂದ ಹೇಗೆ ಹೊರಬರುವುದು?

ನಮ್ಮ ಪೀಳಿಗೆಯ ಹೆಣ್ಣುಮಕ್ಕಳು ತಮ್ಮ ಆಯ್ಕೆಯ ಸ್ವಾತಂತ್ರ್ಯವನ್ನು ತಾವೇ ಉಳಿಸಿಕೊಳ್ಳಬೇಕಿದೆ. ಅದನ್ನು ದಕ್ಕಿಸಿಕೊಳ್ಳಲು ಸಮನಾಗಿ ಗಂಡಿನ ಸಹಾಯವೂ ಬೇಕಿದೆ. ವಿಶ್ವದೆಲ್ಲೆಡೆ ಉದ್ಯೋಗಸ್ಥರಗಳಲ್ಲಿ ಮಹಿಳಾ ಬಾಸ್‌ಗಳ ಸಂಖ್ಯೆ ಹೆಚ್ಚಬೇಕು. ಆಡಳಿತ ವರ್ಗಗಳಲ್ಲೂ ಮಹಿಳೆಯರಿದ್ದರೆ ಹೊಸ ಪೀಳಿಗೆಯವರಿಗೆ ಒಳ್ಳೆಯ ರೋಲ್ ಮಾಡೆಲ್‌ಗಳು ತಯಾರಾದಾರು. ಕುಟುಂಬಗಳಲ್ಲಿ ಮನೆ ಮತ್ತು ಮಕ್ಕಳ ನಿರ್ವಹಣೆಯಲ್ಲಿ ಗಂಡು ಹೆಣ್ಣುಗಳಿಬ್ಬರೂ ಸಮಾನ ಜವಾಬ್ದಾರಿ ಹಂಚಿಕೊಳ್ಳುವಂತಾಗಬೇಕು. ಗಂಡಸರು ಕುಟುಂಬ ನಿರ್ವಹಣೆಯಲ್ಲಿ ತಮ್ಮ ಪಾತ್ರವನ್ನು ಕೇವಲ 'ಹೆಲ್ಪ್' ಮಾಡಲಿಕ್ಕಲ್ಲದೇ 'ಶೇರ್' ಮಾಡುವುದರತ್ತಲೂ ಹಿಗ್ಗಿಸಿಕೊಳ್ಳಬಹುದೇನೋ.

ಆಗಲಾದರೂ ಮುಂದೆ ಬರಲಿರುವ ಶೇಕ್ಸಪಿಯರ್‌ನ ಪ್ರತಿಭಾವಂತ ತಂಗಿಯರನ್ನು ನಾವು ಉಳಿಸಿಕೊಳ್ಳಬಹುದು.